# ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ ಅಧಿನಿಯಮ, 1984

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳು

**ಪ್ರಕರಣಗಳು:**

**ಅಧ್ಯಾಯ I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ಪ್ರಾರಂಭ, ಮುಂತಾದವು.
2. ಪರಿಭಾಷೆಗಳು.
3. ಅಧಿನಿಯಮ ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು.

**ಅಧ್ಯಾಯ II**

**ಪಾಸ್ ಪುಸ್ತಕಗಳ ನೀಡಿಕೆ, ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳು**

4. ಪಾಸ್ ಪುಸ್ತಕಗಳ ನೀಡಿಕೆ, ಮೊದಲಾದುವು.
5. ಪಾಸ್ ಪುಸ್ತಕಗಳ ಮೇಲೆ ಅನುಲೇಖಗಳು.
5ಎ. ಹೊಣೆಗಾರಿಕೆಯ ನೋಂದಣಿ.
6. ಪಾಸ್ ಪುಸ್ತಕವನ್ನು ಹಾಜರುಪಡಿಸಿದ ಹೊರತು ವರ್ಗಾವಣೆಗಳನ್ನು ನೋಂದಾಯಿಸಬಾರದು.
7. ಹೊಣೆಗಳನ್ನು ಸೃಷ್ಟಿಸುವಲ್ಲಿ ಇರುವ ಅಸಾಮರ್ಥ್ಯದ ತೆಗೆದುಹಾಕುವಿಕೆ.
8. ಹೊಣೆಗಾರಿಕೆಯ ಆದ್ಯತೆಗಳು.

**ಅಧ್ಯಾಯ III**

**ಸಂಕೀರ್ಣ**

9. ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ.
10. ನಿಯಮಗಳ ರಚನಾಧಿಕಾರ.

## ಉದ್ದೇಶಗಳು ಮತ್ತು ಕಾರಣಗಳು

**I**

**1986 ಅಧಿನಿಯಮ ಸಂಖ್ಯೆ 2.-** ಸಹಕಾರಿ ಸಂಘಗಳು, ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೇ ಮುಂತಾದ ಹಣಕಾಸು ನೀಡುವ ಸಂಸ್ಥೆಗಳಿಂದ ಕೃಷಿಕರು ಸಾಲಗಳನ್ನು ಪಡೆಯಲು ತಮ್ಮ ಭೂಮಿಗಳ ಮೇಲೆ ತಮಗಿರುವ ಹಕ್ಕುಗಳನ್ನು ಕೂಡಲೇ ರುಜುಗೊಳಿಸಿ ತಮ್ಮ ಸಾಲಾರ್ಹತೆಯನ್ನು ಸ್ಥಾಪಿಸುವಂತೆ ಮಾಡುವುದು ಈ ವಿಧೇಯಕದ ಉದ್ದೇಶವಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳ ಮೇರೆಗೆ ಸಾಲ ಸೌಲಭ್ಯಗಳನ್ನು ಪಡೆಯಲು ಕೃಷಿ ಸಾಲ ಪಾಸ್ ಪುಸ್ತಕದ ಹೊರತಾಗಿ ಬೇರೆ ಯಾವ ಕಾಗದ ಪತ್ರಗಳನ್ನು ಹಾಜರುಪಡಿಸುವ ಅಗತ್ಯವಿರುವುದಿಲ್ಲವೆಂದು ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರವು ಸೂಚಿಸಿದ ಮಾದರಿ ವಿಧೇಯಕದ ಆಧಾರದಿಂದ ಈ ವಿಧೇಯಕವನ್ನು ಸಿದ್ಧಪಡಿಸಲಾಗಿದೆ.

ಭೂಮಿಯ ಹಕ್ಕು ಮತ್ತುಸಾಲ ಅರ್ಹತೆಯ ಬಗೆಗಿನ ಪಾಸ್ ಪುಸ್ತಕದಲ್ಲಿರುವ ನಮೂದುಗಳು ನ್ಯಾಯಾಲಯದಲ್ಲಿಯ ಅಂಗೀಕೃತ ಮೌಲ್ಯವನ್ನುಹೊಂದಿರಬೇಕೆಂದು ಆಶಿಸಲಾಗಿದೆ. ಕೃಷಿ ಸಾಲ ಪಾಸ್ ಪುಸ್ತಕದ ಪದ್ಧತಿಯನ್ನು ಪ್ರಾಯೋಗಿಕವಾಗಿ ಪ್ರತಿಯೊಂದು ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ. ಪಾಸ್ ಪುಸ್ತಕಗಳನ್ನು ನೀಡಿರುವಲ್ಲಿ, ಕರ್ನಾಟಕ ಭೂಕಂದಾಯ ಅಧಿನಿಯಮದ 129-ಎ ಪ್ರಕರಣದ ಮೇರೆಗೆ ನೀಡಬೇಕೆಂದು ಅಗತ್ಯಪಡಿಸಲಾದ ಚಾಲ್ತಿಯಲ್ಲಿರುವ ಪುಸ್ತಕಗಳನ್ನು ನೀಡಲಾಗುವುದಿಲ್ಲ.

(1984ರ ವಿಧಾನಸಭಾ ವಿಧೇಯಕ ಸಂಖ್ಯೆ 19ರಲ್ಲಿದ್ದಂತೆ)

## II

**1987 ಅಧಿನಿಯಮ ಸಂಖ್ಯೆ 23.**- ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ ವಿಧೇಯಕ, 1984ಕ್ಕೆ ರಾಷ್ಟ್ರಪತಿಯವರ ಒಪ್ಪಿಗೆಯನ್ನು ತಿಳಿಸುವಾಗ ಕೇಂದ್ರ ಸರ್ಕಾರದವರು ಮಾಡಿದ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದೆ, ಎಂದರೆ,-

(1) ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್-ಇದರ ಪರಿಭಾಷೆಯನ್ನು ಸ್ಪಷ್ಟಗೊಳಿಸಲಾಗಿದೆ.

(2) ಪಾಸ್ ಪುಸ್ತಕದ ನೀಡಿಕೆಗೆ ಮುಂಚೆ ಅರ್ಜಿದಾರನ ಸಾಲ ಅರ್ಹತೆಯ ಬಗ್ಗೆ ರೆವಿನ್ಯೂ ಅಧಿಕಾರಿಗಳ ವಿಚಾರಣೆ ಮಾಡುವ ಅಗತ್ಯವಿಲ್ಲದಂತೆ ಮಾಡಲಾಗಿದೆ.

(3) ಹೊಣೆಗಾರಿಕೆಯ ನೋಂದಣಿಯ ವಿಧಾನವನ್ನು ಸರಳಗೊಳಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1986ರ ವಿಧಾನಸಭಾ ವಿಧೇಯಕ ಕ್ರಮಾಂಕ 47ರಲ್ಲಿದ್ದಂತೆ)

* * * *

**1986ರ ಕರ್ನಾಟಕ ಅಧಿನಿಯಮ ಸಂಖ್ಯೆ 2**

*(1986ರ ಫೆಬ್ರುವರಿ, 24ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ ಅಧಿನಿಯಮ, 1984.**

*(1986ರ ಜನವರಿ 14ರಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)*

(1987ರ ಅಧಿನಿಯಮ 23ರಲ್ಲಿ ತಿದ್ದುಪಡಿಯಾದಂತೆ)

ಕೃಷಿಕರು ಸಾಲ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ, ಕೃಷಿ ಸಾಲ ಪಾಸ್ ಪುಸ್ತಕಗಳನ್ನು ನೀಡುವ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳ ಸಲುವಾಗಿ ಏರ್ಪಟ್ಟ ಒಂದು ಅಧಿನಿಯಮ.

ಕೃಷಿಕರು ಸಾಲ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಕೃಷಿ ಸಾಲ ಪಾಸ್ ಪುಸ್ತಕಗಳನ್ನು ನೀಡುವ ಸಲುವಾಗಿ ಏರ್ಪಾಟು ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಮೂವತ್ತೈದನೆಯ ವರ್ಷದಲ್ಲಿ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ಪ್ರಾರಂಭ, ಮುಂತಾದವು.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ ಅಧಿನಿಯಮ, 1984 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು ಮತ್ತು ಬೇರೆ ಬೇರೆ ಕ್ಷೇತ್ರಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವು ಅಧಿಸೂಚನೆಯ ಸಂಖ್ಯೆ ಆರ್ ಡಿ 45 ಪಿಆರ್ ಆರ್ 86 ದಿ: 31.10.1986ರಿಂದ ಜಾರಿಗೆ ಬಂದಿರುತ್ತದೆ.

(3) ಯಾವುದೇ ಕ್ಷೇತ್ರದಲ್ಲಿ ಈ ಅಧಿನಿಯಮ ಜಾರಿಯಲ್ಲಿರುವ ಅವಧಿಯಲ್ಲಿ ಅಂಥ ಕ್ಷೇತ್ರದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 12)ರ ಪ್ರಕರಣ 129ಎ ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು ಮತ್ತು ಆ ಅವಧಿಯ ಮುಕ್ತಾಯದ ತರುವಾಯ ಪುನಃ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಕೃಷಿ" ಎಂಬುದು, ಭೂಮಿಯನ್ನು ಸಾಗುವಳಿ ಯೋಗ್ಯವನ್ನಾಗಿ ಮಾಡುವುದು, ಭೂಮಿಯ ಸಾಗುವಳಿ, ನೀರಾವರಿ ಮೂಲಗಳ ಅಭಿವೃದ್ಧಿ ಸೇರಿದಂತೆ ಭೂಮಿಯ ಅಭಿವೃದ್ಧಿ, ಬೆಳೆಗಳನ್ನು ಬೆಳೆಸುವುದು ಮತ್ತು ಕೊಯ್ಲು ಮಾಡುವುದು ಮತ್ತು ಕೃಷಿಕರು ಸಾಮಾನ್ಯವಾಗಿ ಕೈಗೊಳ್ಳುವಂಥ ನಿಯಮಿಸಲಾದ ಇತರ ಕಾರ್ಯಚಟುವಟಿಕೆಗಳನ್ನು ಒಳಗೊಳ್ಳುತ್ತದೆ;

(ಬಿ) "ಕೃಷಿಕ" ಎಂದರೆ, ಕೃಷಿಯಲ್ಲಿ ತೊಡಗಿರುವ ಒಬ್ಬ ವ್ಯಕ್ತಿ;

(ಸಿ) "ಬ್ಯಾಂಕ್" ಎಂದರೆ, ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (ಕೇಂದ್ರಾಧಿನಿಯಮ, 1949ರ 10)ರ 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿರುವಂಥ ಒಂದು ಬ್ಯಾಂಕಿಂಗ್ ಕಂಪನಿ ಮತ್ತು ,-

[1][(i) xxx][1]

1. 1987ರ ಅಧಿನಿಯಮ ಸಂಖ್ಯೆ 23ರ ಮೂಲಕ ದಿ: 4.6.1987ರಿಂದ ಲೋಪಿಸಲಾಗಿದೆ.

(ii) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ, 1955 (ಕೇಂದ್ರಾಧಿನಿಯಮ 1955ರ 23)ರ ಮೇರೆಗೆ ರಚಿತವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು;

(iii) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಸಹಾಯಕ ಬ್ಯಾಂಕುಗಳು) ಅಧಿನಿಯಮ, 1959 (ಕೇಂದ್ರಾಧಿನಿಯಮ 1959ರ 38)ರಲ್ಲಿ ಪರಿಭಾಷಿಸಿರುವಂಥ ಒಂದು ಸಹಾಯಕ ಬ್ಯಾಂಕನ್ನು;

[1][(iv) ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕು ಅಧಿನಿಯಮ, 1981 (ಕೇಂದ್ರಾಧಿನಿಯಮ 1981ರ 61)ರ ಅಡಿಯಲ್ಲಿ ರಚಿತವಾದ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕು.][1]

1. 1987ರ ಅಧಿನಿಯಮ ಸಂಖ್ಯೆ 23ರ ಮೂಲಕ ದಿ: 4.6.1987ರಿಂದ ಪ್ರತಿಸ್ಥಾಪಿಸಲಾಗಿದೆ.

(v) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (ಕೇಂದ್ರಾಧಿನಿಯಮ 1970ರ 5)ರ ಮೇರೆಗೆ ರಚಿತವಾದ ಸಂವಾದಿ ಹೊಸ ಬ್ಯಾಂಕನ್ನು;

(vi) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (ಕೇಂದ್ರಾಧಿನಿಯಮ 1980ರ 40)ರ ಮೇರೆಗೆ ರಚಿತವಾದ ಸಂವಾದಿ ಹೊಸ ಬ್ಯಾಂಕನ್ನು;

(vii) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ, 1976 (ಕೇಂದ್ರಾಧಿನಿಯಮ 1976ರ 1)ರ ಮೇರೆಗೆ ರಚಿತವಾದ ಒಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು;

(viii) ಕಂಪನಿಗಳ ಅಧಿನಿಯಮ, 1956 (ಕೇಂದ್ರಾಧಿನಿಯಮ 1956ರ 1)ರ ಮೇರೆಗೆ ಸ್ಥಾಪಿತವಾದ ಒಂದು ಕಂಪನಿಯಾಗಿರುವ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮವನ್ನು;

(ix) ಕಂಪನಿಗಳ ಅಧಿನಿಯಮ, 1956 (ಕೇಂದ್ರಾಧಿನಿಯಮ 1956ರ 1)ರ ಮೇರೆಗೆ ಸ್ಥಾಪಿತವಾದ ಒಂದು ಕಂಪನಿಯಾಗಿರುವ ಕೃಷಿ ಹಣಕಾಸು ನಿಗಮ, ನಿಯಮಿತ-ಇದನ್ನು;

(x) ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಇತರ ಯಾವುದೇ ಹಣಕಾಸು ಸಂಸ್ಥೆಯನ್ನು; ಮತ್ತು

(xi) ಒಂದು ಸಹಕಾರಿ ಸಂಘವನ್ನು,

-ಒಳಗೊಳ್ಳುತ್ತದೆ;

(ಡಿ) "ಸಹಕಾರಿ ಸಂಘ" ಎಂದರೆ, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 (ಕರ್ನಾಟಕ ಅಧಿನಿಯಮ 1959ರ 11)ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ, ತನ್ನ ಸದಸ್ಯರಿಗೆ ಹಣಕಾಸು ನೆರವನ್ನು ಒದಗಿಸುವ ಉದ್ದೇಶ ಹೊಂದಿರುವ ಒಂದು ಸಹಕಾರಿ ಸಂಘ, ಕೃಷಿ ಮತ್ತು ಸಹಕಾರಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು ಒಳಗೊಳ್ಳುತ್ತದೆ;

(ಇ) "ಹಣಕಾಸಿನ ನೆರವು" ಎಂದರೆ, ಸಾಲಗಳು, ಮುಂಗಡಗಳು, ಖಾತರಿಗಳು ಅಥವಾ ಇತರ ರೀತಿಯ ಮೂಲಕ ಕೃಷಿ ಉದ್ದೇಶಗಳಿಗಾಗಿ ನೀಡುವ ಒಂದು ನೆರವು;

(ಎಫ್) "ಭೂಮಿ" ಎಂದರೆ, ಕೃಷಿ ಉದ್ದೇಶಗಳಿಗಾಗಿ ಮತ್ತು ಅದಕ್ಕೆ ಸಾಧಕವಾದ ಯಾವುದೇ ಉದ್ದೇಶಕ್ಕಾಗಿ ಬಳಸಲಾಗುವ ಮತ್ತು ಸರ್ಕಾರವು ಭೂ ಕಂದಾಯಕ್ಕಾಗಿ ಕರ ನಿರ್ಧರಿಸಿರುವ ಆದರೆ, ನಿಗಮ, ಪುರಸಭೆ ಅಥವಾ ಅಧಿಸೂಚಿತ ಪ್ರದೇಶದ ಸ್ಥಳೀಯ ಪರಿಮಿತಿಗಳೊಳಗಿರುವ ಯಾವುದೇ ವಾಸಗೃಹಕ್ಕೆ ಹೊಂದಿಕೊಂಡಿರುವ ಭೂಮಿಯಾಗಿಲ್ಲದ ಭೂಮಿ;

(ಜಿ) "ಪಾಸ್ ಪುಸ್ತಕ" ಎಂದರೆ, 4ನೇ ಪ್ರಕರಣದ ಅಡಿಯಲ್ಲಿ ನೀಡಲಾಗುವ ಕೃಷಿ ಸಾಲ ಪಾಸ್ ಪುಸ್ತಕ;

(ಎಚ್) "ಕಂದಾಯ ಅಧಿಕಾರಿ" ಎಂದರೆ, ಒಬ್ಬ ತಹಸೀಲ್ದಾರ ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದಿಂದ ನೇಮಕಗೊಂಡ ಇತರ ಯಾವೊಬ್ಬ ಅಧಿಕಾರಿ; ಮತ್ತು

(ಐ) "ಸಬ್ ರಿಜಿಸ್ಟ್ರಾರ್" ಎಂಬುದು, ನೋಂದಣಿ ಅಧಿನಿಯಮ, 1908 (ಕೇಂದ್ರಾಧಿನಿಯಮ 1908ರ 16) ರಲ್ಲಿ ಅದಕ್ಕೆ ಕೊಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**3. ಅಧಿನಿಯಮ ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು.-** ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 (ಕರ್ನಾಟಕ ಅಧಿನಿಯಮ 1959ರ 11)ರಲ್ಲಿ ಅಥವಾ ಈ ಅಧಿನಿಯಮವಲ್ಲದ, ಇತರ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮಿತಿಯ

ಕಾರಣದಿಂದ ಪರಿಣಾಮವುಳ್ಳ ಯಾವುದೇ ಲಿಖಿತ ಪತ್ರದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಪರಿಣಾಮಕಾರಿಯಾಗತಕ್ಕದ್ದು.

## ಅಧ್ಯಾಯ II

## ಪಾಸ್ ಪುಸ್ತಕಗಳ ನೀಡಿಕೆ, ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳು

**4. ಪಾಸ್ ಪುಸ್ತಕಗಳ ನೀಡಿಕೆ, ಮೊದಲಾದುವು.-** (1) ಈ ಅಧಿನಿಯಮವು ಪ್ರಾರಂಭವಾದ ಮೇಲೆ ಕಂದಾಯ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಗೊಳಪಡುವ ಸ್ಥಳೀಯ ಪರಿಮಿತಿಗಳಲ್ಲಿ ತತ್ಕಾಲದಲ್ಲಿ ಭೂಮಿಯನ್ನು ಹೊಂದಿರುವ ಕೃಷಿಕರಿಗೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಿರುವ ಪಾಸ್ ಪುಸ್ತಕಗಳನ್ನು ನೀಡುವ ಮೂಲಕ ಕೃಷಿ ಸಾಲಕ್ಕಾಗಿ ಸೌಲಭ್ಯಗಳನ್ನು ಒದಗಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

(2) ಪಾಸ್ ಪುಸ್ತಕವನ್ನು ಪಡೆಯಲು ಬಯಸುವ ಒಬ್ಬ ಕೃಷಿಕನು ಅಂಥ ಪಾಸ್ ಪುಸ್ತಕವನ್ನು ತನಗೆ ನೀಡುವ ಸಲುವಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಸಂಬಂಧಪಟ್ಟ ಕಂದಾಯ ಅಧಿಕಾರಿಗೆ ಒಂದು ಅರ್ಜಿಯನ್ನು ಸಲ್ಲಿಸಬಹುದು.

(3) (2)ನೇ ಉಪ-ಪ್ರಕರಣದಲ್ಲಿ ಉಲ್ಲಿಖಿತವಾದ ಪ್ರತಿಯೊಂದು ಅರ್ಜಿಯು, ಅರ್ಜಿದಾರನು ಮಾಲೀಕತ್ವ ಹೊಂದಿರುವ ಅಥವಾ ಅದರ ಸಂಬಂಧದಲ್ಲಿ ಅರ್ಜಿದಾರನು ಹಿತಾಸಕ್ತಿ ಹೊಂದಿರುವ ಭೂಮಿಯ ಬಗ್ಗೆ ಅಥವಾ ಅಂಥ ಭೂಮಿಯಲ್ಲಿ ಏನಾದರೂ ಬೆಳೆಗಳು ಇದ್ದರೆ, ಅವುಗಳ ಸಂಬಂಧದಲ್ಲಿ ಮತ್ತು ಆ ಬಗ್ಗೆ ಅರ್ಜಿದಾರನು ಹೊಂದಿರುವ ಹಿತಾಸಕ್ತಿಯ ಬಗ್ಗೆ ಪೂರ್ಣ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) (2)ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಕಂದಾಯ ಅಧಿಕಾರಿಯು, ನಿಯಮಿಸಬಹುದಾದಂಥ ರೀತಿಯಲ್ಲಿ, [1][ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದಂಥ ಭೂಮಿಯ ಬಗ್ಗೆ ಅಥವಾ ಅರ್ಜಿದಾರನು ಅದರಲ್ಲಿ ಹೊಂದಿರುವ ಹಿತಾಸಕ್ತಿಯ ಬಗ್ಗೆ ಅಥವಾ ಅದರ ಮೇಲೆ ನಿಂತ ಯಾವುವೇ ಬೆಳೆಗಳ ಬಗ್ಗೆ ಅರ್ಜಿದಾರನು ಹೊಂದಿರುವ ಹಕ್ಕಿನ ಬಗ್ಗೆ ವಿಚಾರಣೆ ಮಾಡತಕ್ಕದ್ದು ಅಥವಾ ವಿಚಾರಣೆ ನಡೆಯುವಂತೆ ಮಾಡತಕ್ಕದ್ದು][1] ಮತ್ತು ಅಂಥ ವಿಚಾರಣೆಯ ತರುವಾಯ ಕಂದಾಯ ಅಧಿಕಾರಿಗೆ, ಮೇಲೆ ಹೇಳಿದ ಎಲ್ಲ ಅಥವಾ ಯಾವುವೇ ಸ್ವತ್ತುಗಳ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ ಅರ್ಜಿದಾರನ ಹಕ್ಕಿನ ಬಗ್ಗೆ ಮನದಟ್ಟಾದರೆ ಪಾಸ್ ಪುಸ್ತಕವನ್ನು ನೀಡಿದ ದಿನಾಂಕದಂದು [2][x x x][2] ಯಾವ ಸ್ವತ್ತುಗಳ ಸಂಬಂಧದಲ್ಲಿ ಅರ್ಜಿದಾರನು ಹಕ್ಕು ಹೊಂದಿರುವನೋ ಆ ಸ್ವತ್ತುಗಳನ್ನು ಮತ್ತು ಅಂಥ ಯಾವುವೇ ಸ್ವತ್ತುಗಳ ಸಂಬಂಧದಲ್ಲಿ ಅವನಿಗೆ ಋಣಭಾರವೇನಾದರೂ ಇದ್ದರೆ, ಅದರ ವಿಸ್ತೃತಿಯನ್ನು, ಅದರಲ್ಲಿ ಸೂಚಿಸಿ ಅರ್ಜಿದಾರನಿಗೆ ಪಾಸ್ ಪುಸ್ತಕವನ್ನು ನೀಡಬಹುದು.

1. 1987ರ ಅಧಿನಿಯಮ ಸಂಖ್ಯೆ 23ರ ಮೂಲಕ ದಿ: 4.6.1987ರಿಂದ ಪ್ರತಿಸ್ಥಾಪಿಸಲಾಗಿದೆ.
2. 1987ರ ಅಧಿನಿಯಮ ಸಂಖ್ಯೆ 23ರ ಮೂಲಕ ದಿ: 4.6.1987ರಿಂದ ಲೋಪಿಸಲಾಗಿದೆ.

(5) (4)ನೇ ಉಪ-ಪ್ರಕರಣದ ಅಡಿಯಲ್ಲಿ ಕಂದಾಯ ಅಧಿಕಾರಿಯು, ತಾನು ನೀಡಿದ ಪಾಸ್ ಪುಸ್ತಕದ ಒಂದು ಪ್ರತಿಯನ್ನು ತಾನು ಇರಿಸಿಕೊಳ್ಳತಕ್ಕದ್ದು ಮತ್ತು ಅದರ ಒಂದು ಯಥಾಪ್ರತಿಯನ್ನು ಪಾಸ್ ಪುಸ್ತಕದಲ್ಲಿ ನಿರ್ದಿಷ್ಟಪಡಿಸಿರುವ ಸ್ವತ್ತುಗಳು ಇರುವ ಪ್ರದೇಶದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪರಿಮಿತಿಗಳ ಸಬ್ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು ಮತ್ತು ಸಬ್ ರಿಜಿಸ್ಟ್ರಾರನು ಪಾಸ್ ಪುಸ್ತಕದ ಪ್ರತಿಯನ್ನು ಸ್ವೀಕರಿಸಿದ ಮೇಲೆ ಅದನ್ನು ತನ್ನ ದಾಖಲೆಗಳಲ್ಲಿ ಇರಿಸತಕ್ಕದ್ದು.

(6) ತಾನು ನೀಡಿದ ಪಾಸ್ ಪುಸ್ತಕವು ಕಳೆದುಹೋಗಿದೆ ಅಥವಾ ಹಾಳಾಗಿದೆ ಎಂಬ ಬಗ್ಗೆ ಕಂದಾಯ ಅಧಿಕಾರಿಗೆ ಮನದಟ್ಟಾದರೆ, ನಿಯಮಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದಮೇಲೆ ಅವನು ಪಾಸ್ ಪುಸ್ತಕದ ನಕಲು ಪ್ರತಿಯನ್ನು ನೀಡಬಹುದು.

(7) ಕಂದಾಯ ಅಧಿಕಾರಿಯು ನೀಡಿದ ಪಾಸ್ ಪುಸ್ತಕದಲ್ಲಿ ಅವನು ಮಾಡಿದ ಪ್ರತಿಯೊಂದು ನಮೂದು ಸರಿಯಾಗಿರುತ್ತದೆ ಎಂದು ಭಾವಿಸತಕ್ಕದ್ದು.

(8) ಪಾಸ್ ಪುಸ್ತಕದಲ್ಲಿನ ನಮೂದುಗಳು, ಭೂಮಿಯ ಅಥವಾ ಭೂಮಿಯ ಸಂಬಂಧದಲ್ಲಿ ಇರುವ ಇತರ ಹಿತಾಸಕ್ತಿಯ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿರುವ ಬೆಳೆಗಳ ಸಂಬಂಧದಲ್ಲಿ ಧಾರಕನಿಗೆ ಇರುವ ಹಕ್ಕಿನ ಮೇಲುನೋಟದ ಸಾಕ್ಷಿಯಾಗಿರತಕ್ಕದ್ದು ಮತ್ತು ಪಾಸ್ ಪುಸ್ತಕದಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತುಗಳ ಭದ್ರತೆಯ ಮೇಲೆ ಅಥವಾ ಅದಿಲ್ಲದೆಯೇ ಪಾಸ್ ಪುಸ್ತಕಧಾರಕನಿಗೆ ಹಣಕಾಸಿನ ನೆರವನ್ನು ನೀಡುವ ಉದ್ದೇಶಕ್ಕಾಗಿ ಅಂತೆಯೇ ಅಂಗೀಕರಿಸತಕ್ಕದ್ದು.

(9) ಕಂದಾಯ ಅಧಿಕಾರಿಯು, ಕಂದಾಯ ದಾಖಲೆಗಳಲ್ಲಿ ನಮೂದಿಸಿದ ಅಥವಾ ನಮೂದಿಸಬೇಕಾದ ಪರಿವರ್ತನೆ ಅಥವಾ ವರ್ಗಾವಣೆಗಳಿಗೆ ಸಂಬಂಧಪಟ್ಟ ನಮೂದುಗಳನ್ನು ಮಾಡಲು ಪಾಸ್ ಪುಸ್ತಕಧಾರಕನು ಅದನ್ನು ತನ್ನ ಮುಂದೆ ಹಾಜರುಪಡಿಸುವಂತೆ ಆಗಿಂದಾಗ್ಗೆ ಅಗತ್ಯಪಡಿಸಬಹುದು.

**5. ಪಾಸ್ ಪುಸ್ತಕಗಳ ಮೇಲೆ ಅನುಲೇಖಗಳು.-** (1) ಪಾಸ್ ಪುಸ್ತಕ ಧಾರಕನಿಗೆ ಯಾವುದೇ ಹಣಕಾಸಿನ ನೆರವು ನೀಡುವ ಬ್ಯಾಂಕು, ಅಂಥ ಹಣಕಾಸು ನೆರವಿನ ಮೊತ್ತವನ್ನು ಸೂಚಿಸಿ ಪಾಸ್ ಪುಸ್ತಕದ ಮೇಲೆ ಅನುಲೇಖವನ್ನು ಮಾಡತಕ್ಕದ್ದು ಮತ್ತು ಯಾವುದೇ ಸ್ವತ್ತಿನ ಭದ್ರತೆಯ ಮೇಲೆ ಅಂಥ ಹಣಕಾಸಿನ ನೆರವನ್ನು ನೀಡಿದ್ದರೆ, ಯಾವ ಸ್ವತ್ತಿನ ಭದ್ರತೆಯ ಮೇಲೆ ಹಣಕಾಸಿನ ನೆರವನ್ನು ನೀಡಲಾಗಿದೆಯೋ ಆ ಸ್ವತ್ತಿನ ಮುಂದೆ ಸಹ ಅನುಲೇಖವನ್ನು ಮಾಡತಕ್ಕದ್ದು ಮತ್ತು ಹಾಗೆ ಮಾಡಲಾದ ಅನುಲೇಖವು ಯಾವ ಸ್ವತ್ತಿನ ಮುಂದೆ ಹಾಗೆ ಅನುಲೇಖವನ್ನು ಮಾಡಲಾಗಿದೆಯೋ ಆ ಸ್ವತ್ತಿನ ಮೇಲೆ ಬ್ಯಾಂಕಿನ ಪರವಾಗಿ ಹೊಣೆಯನ್ನು ಸೃಜಿಸುವ ಪರಿಣಾಮವನ್ನು ಹೊಂದಿರತಕ್ಕದ್ದು. ಬ್ಯಾಂಕು ನೀಡಿರುವ ಹಣಕಾಸು ನೆರವಿನ ಒಟ್ಟು ಮೊತ್ತವನ್ನು ಬಾಕಿ ಇರುವ ಬಡ್ಡಿ ಸಹಿತವಾಗಿ ಮರುಪಾವತಿ ಮಾಡುವವರೆಗೆ ಸದರಿ ಸ್ವತ್ತನ್ನು ಪರಭಾರೆ ಮಾಡುವುದಕ್ಕೆ ಪಾಸ್ ಪುಸ್ತಕಧಾರಕನು ಪ್ರತಿಷೇಧಿತನಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾಡಿದ ಪ್ರತಿಯೊಂದು ಅನುಲೇಖದ ಒಂದು ಪ್ರತಿಯನ್ನು, ಬ್ಯಾಂಕು, ಕಂದಾಯ ಅಧಿಕಾರಿಗೆ ಮತ್ತು ಇನ್ನೊಂದು ಪ್ರತಿಯನ್ನು ಸದರಿ ಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವು, ಯಾವ ಸಬ್ ರಿಜಿಸ್ಟ್ರಾರ್‌ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗಿದೆಯೋ ಆ ಸಬ್ ರಿಜಿಸ್ಟ್ರಾರ್‌ನಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಅನುಲೇಖದ ಪ್ರತಿಯನ್ನು ಸ್ವೀಕರಿಸಿದ ಮೇಲೆ,-

(ಎ) ಕಂದಾಯ ಅಧಿಕಾರಿಯು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 12)ರ ಅಡಿಯಲ್ಲಿ ತಾನು ಇಡಬೇಕಾದ ಹಕ್ಕುಗಳ ದಾಖಲೆಯ ಪುಸ್ತಕದಲ್ಲಿ ಅವಶ್ಯವಿರುವ ನಮೂದುಗಳನ್ನು ಮಾಡತಕ್ಕದ್ದು; ಮತ್ತು

(ಬಿ) ಸಬ್ ರಿಜಿಸ್ಟ್ರಾರನು 4ನೇ ಪ್ರಕರಣದ ಅಡಿಯಲ್ಲಿ ಅಂಥ ಅನುಲೇಖಗಳನ್ನು ತನಗೆ ಕಳುಹಿಸಿದ ಪಾಸ್ ಪುಸ್ತಕದ ಪ್ರತಿಯ ಮೇಲೆ ಇಡತಕ್ಕದ್ದು ಅಥವಾ ಇಡುವಂತೆ ಮಾಡತಕ್ಕದ್ದು.

(3) ಸದರಿ ಅನುಲೇಖದ ಪ್ರತಿ, ದಾಖಲೆಗಳ ಮೇಲೆ ಇರಿಸಲಾಗಿದೆಯೇ ಇಲ್ಲವೇ ಎಂದು ಅವನು ಮನದಟ್ಟುಮಾಡಿಕೊಳ್ಳುವುದನ್ನು ಸಾಧ್ಯಮಾಡಲು ಮತ್ತು ಹಾಗೆ ಇರಿಸದ ಸಂದರ್ಭದಲ್ಲಿ 4ನೇ ಪ್ರಕರಣದ ಅಡಿಯಲ್ಲಿ ಕಳಿಸಲಾದ ಪಾಸ್ ಪುಸ್ತಕದಲ್ಲಿ ಸದರಿ ಅನುಲೇಖಗಳನ್ನು ಪ್ರತಿಲೇಖ ಮಾಡಿಸಲು ಪಾಸ್ ಪುಸ್ತಕಧಾರಕನು ಪಾಸ್ ಪುಸ್ತಕದ ಮೇಲೆ ಬ್ಯಾಂಕು ಮಾಡಿದಂಥ ಅನುಲೇಖವನ್ನು ಸಬ್ ರಿಜಿಸ್ಟ್ರಾರ್‌ನ ಮುಂದೆ ಹಾಜರು ಸಹ ಮಾಡಬಹುದು.

[1][**5ಎ. ಹೊಣೆಗಾರಿಕೆಯ ನೋಂದಣಿ.-** ಭಾರತೀಯ ನೋಂದಣಿ ಅಧಿನಿಯಮ, 1908ರಲ್ಲಿ ಏನೇ ಇದ್ದರೂ, 5ನೇ ಪ್ರಕರಣದ (1)ನೇ ಉಪ-ಪ್ರಕರಣದಡಿಯಲ್ಲಿ ಪಾಸ್ ಪಸ್ತಕದಲ್ಲಿ ಅನುಲೇಖ ಮಾಡಲಾಗಿರುವ ಸ್ವತ್ತಿನ ವಿರುದ್ಧ ಬ್ಯಾಂಕಿನ ಪರವಾಗಿ ಮಾಡಲಾಗಿರುವ ಹೊಣೆಗಾರಿಕೆಯನ್ನು ಅಂಥ ಪ್ರತಿಯೊಂದು ಅನುಲೇಖದ ಒಂದು ಪ್ರತಿಯನ್ನು 5ನೇ ಪ್ರಕರಣದ 2ನೇ ಉಪ-ಪ್ರಕರಣದಡಿಯಲ್ಲಿ ಸಬ್-ರಿಜಿಸ್ಟ್ರಾರ್‌ರವರಿಗೆ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ಸಮಯದೊಳಗೆ ಕಳುಹಿಸಿದಾಗ ಅನುಲೇಖದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಯಥೋಚಿತವಾಗಿ ನೋಂದಣಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.][1]

1. 1987ರ ಅಧಿನಿಯಮ ಸಂಖ್ಯೆ 23ರ ಮೂಲಕ ದಿ: 4.6.1987ರಿಂದ ಸೇರಿಸಲಾಗಿದೆ.

**6. ಪಾಸ್ ಪುಸ್ತಕವನ್ನು ಹಾಜರುಪಡಿಸಿದ ಹೊರತು ವರ್ಗಾವಣೆಗಳನ್ನು ನೋಂದಾಯಿಸಬಾರದು.-** (1) ಪಾಸ್ ಪುಸ್ತಕದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಭೂಮಿ ಅಥವಾ ಅಂಥ ಭೂಮಿಯಲ್ಲಿರುವ ಯಾವುದೇ ಹಿತಾಸಕ್ತಿ

ಅಥವಾ ಅದರ ಮೇಲೆ ನಿಂತಿರುವ ಯಾವುದೇ ಬೆಳೆಯ ಸಂಬಂಧದಲ್ಲಿ ಪಾಸ್ ಪುಸ್ತಕಧಾರಕನು ಮಾಡಿದ ವರ್ಗಾವಣೆಯನ್ನು ತನ್ನ ಮುಂದೆ ಪಾಸ್‌ಪುಸ್ತಕವನ್ನು ಹಾಜರುಮಾಡಿದ ಹೊರತು ಸಬ್ ರಿಜಿಸ್ಟ್ರಾರನು ನೋಂದಣಿ ಮಾಡತಕ್ಕದ್ದಲ್ಲ ಮತ್ತು ಪಾಸ್ ಪುಸ್ತಕವನ್ನು ಹಾಜರು ಮಾಡಿದ ಮೇಲೆ ಅವನು ತಾನು ನೋಂದಣಿ ಮಾಡಿದ ವರ್ಗಾವಣೆಯ ವಿವರಗಳನ್ನು ಸೂಚಿಸುವಂಥ ಅನುಲೇಖವನ್ನು ಅದರ ಮೇಲೆ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಪಾಲಿಸದೆ ಪಾಸ್ ಪುಸ್ತಕಧಾರಕನು ಮಾಡಿದ ಯಾವುದೇ ವರ್ಗಾವಣೆಯು ಶೂನ್ಯವಾಗತಕ್ಕದ್ದು ಮತ್ತು ಯಾವುದೇ ಹಕ್ಕನ್ನು ವರ್ಗಾಯಿಸತಕ್ಕದ್ದಲ್ಲ.

7. **ಹೊಣೆಗಳನ್ನು ಸೃಷ್ಟಿಸುವಲ್ಲಿ ಇರುವ ಅಸಾಮರ್ಥ್ಯದ ತೆಗೆದು ಹಾಕುವಿಕೆ.**- ಯಾವುದೇ ಭೂಮಿಯ ಅಥವಾ ಅದರಲ್ಲಿರುವ ಹಿತಾಸಕ್ತಿಯ ಅಥವಾ ಅದರ ಮೇಲೆ ನಿಂತ ಬೆಳೆಗಳ ಮೇಲೆ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಒಂದು ಸಹಕಾರಿ ಸಂಘದ ಪರವಾಗಿ ಯಾವುದೇ ಹೊಣೆಯನ್ನು ಸೃಷ್ಟಿಸಿದ್ದಲ್ಲಿ , ಒಬ್ಬ ಕೃಷಿಕನಿಗೆ ಅಂಥ ಪ್ರಾರಂಭದ ತರುವಾಯ, ಕೃಷಿಕನಿಗೆ ಬ್ಯಾಂಕ್ ನೀಡಿದ ಯಾವುದೇ ಹಣಕಾಸಿನ ನೆರವಿಗೆ ಭದ್ರತೆಯಾಗಿ ಬ್ಯಾಂಕಿನ ಪರವಾಗಿ ಅಂಥ ಭೂಮಿ ಅಥವಾ ಅದರ ಮೇಲಿನ ಹಿತಾಸಕ್ತಿ ಅಥವಾ ಅದರ ಮೇಲೆ ನಿಂತ ಬೆಳೆಗಳ ಮೇಲೆ ಒಂದು ಅನುವರ್ತಿ ಹೊಣೆಯನ್ನು ಸೃಷ್ಟಿಸುವುದು ಕಾನೂನು ಸಮ್ಮತವಾಗಿಕತಕ್ಕದ್ದು.

8. **ಹೊಣೆಗಾರಿಕೆಯ ಆದ್ಯತೆಗಳು.**- ಈ ಅಧಿನಿಯಮದ ಪ್ರಾರಂಭದ ತರುವಾಯದಲ್ಲಿ ಸರ್ಕಾರದ ಅಥವಾ ಸಹಕಾರಿ ಸಂಘದ ಪರವಾಗಿ ಯಾವುದೇ ಭೂಮಿ ಅಥವಾ ಹಿತಾಸಕ್ತಿ ಅಥವಾ ಅದರ ಮೇಲೆ ನಿಂತ ಬೆಳೆಗಳ ಮೇಲೆ ಸೃಷ್ಟಿಸಿದ ಯಾವುದೇ ಹೊಣೆ ಅಥವಾ ಅಡಮಾನಕ್ಕೆ ಈ ಅಧಿನಿಯಮದ ಪ್ರಾರಂಭದ ತರುವಾಯ ಮತ್ತು ಸರ್ಕಾರ ಅಥವಾ ಸಹಕಾರಿ ಸಂಘದ ಪರವಾಗಿರುವ ಹೊಣೆ ಅಥವಾ ಅಡಮಾನಕ್ಕೆ ಮುಂಚೆ ಬ್ಯಾಂಕು ಕೃಷಿಕನಿಗೆ ನೀಡಿದ ಹಣಕಾಸಿನ ನೆರವಿಗೆ ಭದ್ರತೆಯಾಗಿ ಬ್ಯಾಂಕಿನ ಪರವಾಗಿ ಕೃಷಿಕನು ಅಂಥ ಭೂಮಿ ಅಥವಾ ಹಿತಾಸಕ್ತಿಯಮೇಲೆ ಸೃಷ್ಟಿಸಿದ ಒಂದು ಹೊಣೆ ಅಥವಾ ಅಡಮಾನದ ಮೇಲೆ ಆದ್ಯತೆ ಇರತಕ್ಕದ್ದಲ್ಲ.

## ಅಧ್ಯಾಯ III

## ಸಂಕೀರ್ಣ

9. **ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ.**- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದ ಸಲುವಾಗಿ ಸರ್ಕಾರ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಿಯ ವಿರುದ್ಧ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

10. **ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಸಲುವಾಗಿ ಉಪಬಂಧ ಕಲ್ಪಿಸಬಹುದು, ಎಂದರೆ :-

(ಎ) 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಬಹುದಾದ ಪಾಸ್ ಪುಸ್ತಕಗಳ ನಮೂನೆ;

(ಬಿ) 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಗಾಗಿ ಬಳಸಬೇಕಾದ ನಮೂನೆ ಮತ್ತು ಅದರ ಶುಲ್ಕ;

(ಸಿ) 4ನೇ ಪ್ರಕರಣದ (4)ನೇ ಉಪ-ಪ್ರಕರಣದ ಅಡಿಯಲ್ಲಿ ಕಂದಾಯ ಅಧಿಕಾರಿ ವಿಚಾರಣೆಯನ್ನು ಮಾಡಬಹುದಾದ ಅಥವಾ ಮಾಡುವಂತೆ ಮಾಡುವ ರೀತಿ;

(ಡಿ) 4ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ನಕಲು ಪಾಸ್ ಪುಸ್ತಕಕ್ಕೆ ಸಂದಾಯ ಮಾಡಲು ಅಗತ್ಯಪಡಿಸಲಾದ ಶುಲ್ಕಗಳು; ಮತ್ತು

(ಇ) ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಬಹುದಾದ ಅಥವಾ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಮೇಲೆ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು

ಅಧೀವೇಶನದಲ್ಲಿ ಅಥವಾ ಒಂದಾದಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕದ್ದು ಮತ್ತು ಹಿಂದೆ ಹೇಳಿದ, ಅಧಿವೇಶನದ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ, ನಿಕಟೋತ್ತರ ಅಧಿವೇಶನ ಮುಗಿಯುವುದಕ್ಕೂ ಮೊದಲು, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿದರೆ ಆ ನಿಯಮವು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಅಧಿಸೂಚನೆ ಮಾಡಿದ ದಿನಾಂಕದಿಂದ, ಸಂದರ್ಭಾನುಸಾರ, ಅಂಥ ಮಾರ್ಪಾಟು ಆದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಅದರೆ, ಅಂಥ ಮಾರ್ಪಾಟು ಅಥವಾ ರದ್ದಿಯಾತಿ ಆ ನಿಯಮದ ಅಡಿಯಲ್ಲಿ, ಹಿಂದೆ ಮಾಡಿದ ಯಾವುದೇ ಕಾರ್ಯದ ಊರ್ಜಿತತೆಗೆ ಪ್ರತಿಕೂಲವಾಗಿ ಇರತಕ್ಕದ್ದಲ್ಲ.

* * * *

**ಅಧಿಸೂಚನೆ**

**ಬೆಂಗಳೂರು ದಿನಾಂಕ 3ಂನೇ ಅಕ್ಟೋಬರ್ 1986 [ಸಂಖ್ಯೆ: ಆರ್ ಡಿ 45 ಟಿ ಆರ್ ಆರ್ 86]**

ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ ಅಧಿನಿಯಮ, 1984 (1986ರ ಕರ್ನಾಟಕ ಅಧಿನಿಯಮ 2)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 1986' ಅಕ್ಟೋಬರ್ 31ನೇ ದಿನಾಂಕವನ್ನು ಈ ಕೆಳಗೆ ನಿರ್ಧಿಷ್ಟಪಡಿಸಲಾದ ಕ್ಷೇತ್ರಗಳಲ್ಲಿ ಮೇಲ್ಕಂಡ ಅಧಿನಿಯಮವು ಜಾರಿಯಲ್ಲಿ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

**ಕ್ಷೇತ್ರಗಳು**

| | | |
|---|---|---|
| 1. | ತಿಪಟೂರು ತಾಲ್ಲೂಕು | (ತುಮಕೂರು ಜಿಲ್ಲೆ) |
| 2. | ಸಿರಸಿ ತಾಲ್ಲೂಕು | (ಉತ್ತರಕನ್ನಡ ಜಿಲ್ಲೆ) |
| 3. | ಸೋಮವಾರಪೇಟೆ ತಾಲ್ಲೂಕು | (ಕೊಡಗು ಜಿಲ್ಲೆ) |
| 4. | ಗುಲ್ಬರ್ಗ ತಾಲ್ಲೂಕು | (ಗುಲ್ಬರ್ಗ ಜಿಲ್ಲೆ) |

* * * *